UASB LIBRARY
Newspaper Clippings

Pg .1 Thursday 25-11-2021 **Jai Kisan**



ಮಳೆಗೆ ಬೆಳೆ ಹಾನಿ | ಪೂರೈಕೆಯಲ್ಲಿ ಇಳಿಕೆ | ಬೆಲೆ ಏರಿಕೆ

ಟೊಮೆಟೊ ಕೈಗೆಟುಕದಷ್ಟು ತುಟ್ಟಿ

• ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಅಡುಗೆ ಮನೆಯ ಅನಿವಾರ್ಯ ತರಕಾರಿಯಾಗಿರುವ ಟೊಮೆಟೊ ಈಗ ಕೈಗೆಟುಕದಷ್ಟು ತುಟ್ಟಿಯಾಗಿದೆ. ಮಾರುಕಟ್ಟೆಯಲ್ಲಿ ಎರಡು ಮೂರು ದಿನದಿಂದ ಟೊಮೆಟೊ ಬೆಲೆ ಶತಕ ದಾಟಿ ದಾಖಲೆ ನಿರ್ಮಿಸಿದೆ. ಈ ಮೊದಲು ಟೊಮೆಟೊ ಬೆಲೆ ಈ ಪರಿಯಾಗಿ ಏರಿಕೆಯಾದದ್ದಿಲ್ಲ ಎಂದು ವ್ಯಾಪಾರಿಗಳೇ ಹೇಳುತ್ತಿದ್ದಾರೆ. ಬೆಲೆ ಏರಿಕೆಯಿಂದಾಗಿ ಜನ ಟೊಮೆಟೊ ನೋಡುವಾಗಲೇ ಬೆಚ್ಚಿ ಬೀಳುತ್ತಿದ್ದಾರೆ.

ಅಕಾಲಿಕ ಮಳೆಗೆ ಬೆಳೆ ನಾಶ: ಅಕಾಲಿಕ ಮಳೆಯಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ನಾಶವಾಗಿವೆ. ಮಾರುಕಟ್ಟೆಯಲ್ಲಿ ಎಲ್ಲ ತರಕಾರಿಗಳ ಬೆಲೆ ಗಗನಮುಖಿಯಾಗಿದ್ದು, ಟೊಮೆಟೊಗೆ ದಾಖಲೆ ಬೆಲೆ ಬಂದಿದೆ. ಬೆಲೆ ಏರಿಕೆಯಿಂದ ಗ್ರಾಹಕರು ಮಾತ್ರವಲ್ಲದೆ ವ್ಯಾಪಾರಿಗಳು ಸಹ ಮಾರುಕಟ್ಟೆಯತ್ತ ಬರುತ್ತಿಲ್ಲ. ದಿಢೀರ್ ಬೆಲೆ ಏರಿಕೆಯಿಂದ ಮಾರುಕಟ್ಟೆಯ ಚಿತ್ರಣವೇ ಬದಲಾಗಿದೆ.

ಕೆ.ಜಿ. ಟೊಮೆಟೊ 130 ರೂ.: ನ.17ರಂದು ಒಂದು ಕಿಲೋ ಟೊಮೆಟೊ 76 ರೂ. ಇತ್ತು. ನ.20ರಂದು 104 ರೂ. ಆಗಿತ್ತು.

ತ.ನಾಡು ಸರ್ಕಾರದಿಂದ 79 ರೂ.ಗೆ ಕೆಜಿ ಟೊಮೆಟೊ

ಚೆನ್ನೈ: ಟೊಮೆಟೊ ದರ ಗಗನಕ್ಕೇರಿರುವ ಹಿನ್ನೆಲೆ ಗ್ರಾಹಕರಿಗೆ ಕಡಿಮೆ ಬೆಲೆಗೆ ಒದಗಿಸುವುದಕ್ಕಾಗಿ ತಮಿಳುನಾಡಿನಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಆರಂಭಿಸಲಾಗಿದೆ. ಚೆನ್ನೈನಲ್ಲಿನ ತೆಯನಂಪೇಟೆಯಲ್ಲಿ ಸರ್ಕಾರಿ ಸ್ವಾಮ್ಯದ ಕೃಷಿ ಉತ್ಪನ್ನಗಳ ಮಳಿಗೆಯಲ್ಲಿ ಈಗ ಗ್ರಾಹಕರಿಗೆ ಟೊಮೆಟೊ 79 ರೂ.ಗಳಿಗೆ ಲಭ್ಯವಾಗುತ್ತಿದ್ದು, ರಾಜ್ಯ ಸರ್ಕಾರದ ಈ ತೀರ್ಮಾನವನ್ನು ಹಲವರು ಸ್ವಾಗತಿಸಿದ್ದಾರೆ. ಪ್ರಸ್ತುತ ತಮಿಳುನಾಡಿನಲ್ಲ ಟೊಮೆಟೊ ಪ್ರತಿ ಕೆಜಿಗೆ 120 ರೂ. ಬೆಲೆಯಿದ್ದು, ನ್ಯಾಯಬೆಲೆ ಅಂಗಡಿಯಲ್ಲಿ 79 ರೂ.ಗಳಿರುವುದರಿಂದ ಗ್ರಾಹಕರಿಗೆ ಅನುಕೂಲವಾಗಿದೆ.



“ ಹಿಂದೆ ಯಾವತ್ತೂ ಟೊಮೆಟೊ ಬೆಲೆ ಈ ಪರಿ ಹೆಚ್ಚಾಗಿದ್ದು ಕಂಡಿರಲಿಲ್ಲ. ಬೆಲೆ ಏರಿಕೆಯಿಂದ ಸಾಮಾನ್ಯರಿಗೆ ತೊಂದರೆಯಾಗುತ್ತಿದೆ.

■ ಸುರೇಶ ಹೆಬ್ಬಳ್ಳಿ, ಗ್ರಾಹಕ

25-11-2021
Hd Pg 01

ತರಕಾರಿ ಬೀಜ ಉತ್ಪಾದನೆ ಮಾಡಿ

ಬೆಂಗಳೂರು: ರಾಜ್ಯ ಬೀಜ ನಿಗಮ ತಳಿವರ್ಧಿತ ಬಿತ್ತನೆ ಬೀಜಗಳ ಜತೆಗೆ ರೈತರಿಗೆ ಲಾಭದಾಯಕವಾಗುವ ತರಕಾರಿ ಬೀಜಗಳನ್ನೂ ಉತ್ಪಾದಿಸಲಿ ಎಂದು ನಿಗಮದ ಅಧ್ಯಕ್ಷರೂ ಆಗಿರುವ ಕೃಷಿ ಸಚಿವ ಬಿ.ಸಿ. ಪಾಟೀಲ್ ಸೂಚಿಸಿದ್ದಾರೆ.

ಹೆಬ್ಬಾಳದಲ್ಲಿರುವ ಬೀಜ ನಿಗಮದಲ್ಲಿ ಅಧಿಕಾರಿಗಳು ಹಾಗೂ ಜಿಲ್ಲಾ ಉಪವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಭೆ ನಡೆಸಿ ಮಾತನಾಡಿದರು. ಬೀಜ ನಿಗಮ ರೈತರಿಗೆ ಬರಿ ಬಿತ್ತನೆ ಬೀಜವನ್ನು ಪೂರೈಸುವ ಕೆಲಸವನ್ನಷ್ಟೇ ಮಾಡಬಾರದು. ತಳಿವರ್ಧಿತ ಬಿತ್ತನೆ ಬೀಜವನ್ನು ಉತ್ಪಾದಿಸುವ ಜತೆಗೆ ರೈತರಿಗೆ ಲಾಭ ತರುವ ಗುಣಮಟ್ಟದ ಬಿತ್ತನೆ ಬೀಜ ಉತ್ಪಾದಿಸುವ ನಿಗಮವಾಗಬೇಕು.

» ರೈತರಿಗೆ ಸಚಿವ ಬಿ.ಸಿ. ಪಾಟೀಲ್ ಸೂಚನೆ

ಆ ಮೂಲಕ ನಿಗಮ ದೇಶದಲ್ಲಿಯೇ ಲಾಭದಾಯಕ ನಿಗಮವಾಗಬೇಕು. ರೈತರ ಹಿತದೃಷ್ಟಿಯಿಂದ ತರಕಾರಿ ಬಿತ್ತನೆ ಬೀಜಗಳನ್ನು ಸಹ ರಾಜ್ಯ ಬೀಜ ನಿಗಮ ಉತ್ಪಾದಿಸಿ ಮಾರಾಟ ಮಾಡಬೇಕು. ಇದಕ್ಕೆ ಅಗತ್ಯವಾದ ಕೌಶಲ ತರಬೇತಿ ವೃತ್ತಿಪರತೆಯನ್ನು ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರು ಹೊಂದಬೇಕು. ಆ ಮೂಲಕ ಕರ್ನಾಟಕ ತೈಲ ನಿಗಮದಂತೆ ಬೀಜ ನಿಗಮವು ಸಹ ಲಾಭದಾಯವಾಗಬೇಕೆಂದು ಬಿ.ಸಿ. ಪಾಟೀಲ್ ಕರೆ ನೀಡಿದರು.

25-11-2021
Vv Pg 4A

For more information visit
University Library Website
Web - uasbagrilibindia.org
E-mail- librarian@uasbangalore.edu.in

“Happiness comes when your work and words are of benefit to other”

ಗೊರವಾಲೆ ಗ್ರಾಮದಲ್ಲಿ ಕ್ಷೇತ್ರೋತ್ಸವ ಉದ್ಘಾಟನೆ

300ಕ್ಕೂ ಹೆಚ್ಚು ತಳಿ ಲೋಕಾರ್ಪಣೆ

ಮಂಡ್ಯ: ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಹೊಸ ಹೊಸ ತಳಿಗಳನ್ನು ಬಿಡುಗಡೆ ಮಾಡಲಾಗಿದ್ದು, ಈವರೆಗೆ ಸುಮಾರು 300ಕ್ಕೂ ಹೆಚ್ಚು ತಳಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಬೆಂಗಳೂರು ಕೃಷಿ ವಿಸ್ತರಣಾಽಕಾರಿ ಡಾ. ಎನ್. ದೇವಕುಮಾರ್ ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯ, ವಿ.ಸಿ. ಫಾರಂ ಕೃಷಿ ವಿಜ್ಞಾನ ಕೇಂದ್ರ ಇವರ ವತಿಯಿಂದ ತಾಲೂಕಿನ ಗೊರವಾಲೆ ಗ್ರಾಮದ ದೇವರಾಜು ಅವರ ಜಮೀನಿನಲ್ಲಿ ನಡೆದ ಕ್ಷೇತ್ರೋತ್ಸವ ಉದ್ಘಾಟಿಸಿ ಮಾತನಾಡಿ, ಪ್ರತೀ ವರ್ಷ ಕೃಷಿ ವಿವಿಯಿಂದ ರೈತರಿಗಾಗಿ ಹಲವಾರು ತಳಿಗಳನ್ನು ಬಿಡುಗಡೆ ಮಾಡಲಾಗುತ್ತೆ. ಜೊತೆಗೆ ಅದನ್ನು ರೈತರ ಜಮೀನಿನಲ್ಲಿ ಬೆಳೆದು ಉತ್ತಮವಾದ ತಳಿಗಳಾದಲ್ಲಿ ರೈತರಿಗೆ ಅರಿವು ಮೂಡಿಸಲಾಗುತ್ತದೆ ಎಂದು ಹೇಳಿದರು.

ರೈತರ ಜಮೀನಿನಲ್ಲಿ ಬೆಳೆಯುವ ಇಂತಹ ತಳಿಗಳು ಯಾವ ರೀತಿ ಬರುತ್ತೆ, ಇಳುವರಿ ಹೇಗೆ ಬರುತ್ತದೆ ಎಂಬುದರ ಕುರಿತಂತೆ ಬೆಳಕು ಚೆಲ್ಲಲು ಇಂತಹ ಕ್ಷೇತ್ರೋತ್ಸವಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅದನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯಾವುದೋ ಒಂದು ಪ್ರದೇಶಕ್ಕೆ, ವಾತಾವರಣಕ್ಕೆ ಅನುಗುಣವಾಗಿಯೂ ತಳಿಗಳನ್ನು ಉತ್ಪಾದಿಸಲಾಗುತ್ತದೆ. ಅದರ ಬಗ್ಗೆಯೂ ರೈತರಿಗೆ ಮಾಹಿತಿ ನೀಡಲಾಗುತ್ತದೆ. ಯಾವ ಪ್ರದೇಶಕ್ಕೆ ಯಾವ ತಳಿಗಳು

ಅಗತ್ಯವಿದೆಯೋ ಅದನ್ನು ಪರಿಶೀಲಿಸಿ ತಮ್ಮ ಜಮೀನುಗಳಲ್ಲಿ ಬೆಳೆದು ಕೃಷಿಯಲ್ಲಿ ಆದಾಯ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಉಪಯೋಗುವ ತಳಿಗಳನ್ನು ಹೆಚ್ಚಾಗಿ ಉತ್ಪಾದನೆ ಮಾಡುತ್ತಿದ್ದು, ಹೆಚ್ಚಿನ ವಿತರಣೆಗಾಗಿ ಬಿತ್ತನೆ ಬೀಜ ತಯಾರಿಸುವುದು, ರೈತರಿಗೆ ಹೊಸ ತಳಿ ಬಗ್ಗೆ ಮನವರಿಕೆ ಮಾಡಿಕೊಡುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಬಿತ್ತನೆ ಬೀಜದ ಬಗ್ಗೆ ತಾಂತ್ರಿಕ ಮಾಹಿತಿ ಅಗತ್ಯವಿದ್ದಲ್ಲಿ ಕೃಷಿ ವಿಜ್ಞಾನಿಗಳನ್ನು ಸಂಪರ್ಕಿಸಬಹುದು ಎಂದು ಸಲಹೆ ನೀಡಿದರು.

ತಳಿವರ್ಧಕ ಬೀಜವನ್ನು ಒಂದು ವರ್ಷ ಮೊದಲೇ ಕರ್ನಾಟಕ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ ಅಲ್ಲಿಂದಲೂ ಸಹ ಬೀಜೋತ್ಪದನೆ ಮಾಡಿ ನೀಡಲಾಗುತ್ತದೆ ಎಂದು ತಿಳಿಸಿದರು.

ಕೆವಿಕೆ ಹಿರಿಯ ವಿಜ್ಞಾನಿ ಡಾ.ಎನ್.ಪಿ.ನರೇಶ್, ವಿಜ್ಞಾನಿ ಡಾ.ಷಡಕ್ಷರಿ, ಬೇಸಾಯಶಾಸ್ತ್ರ ವಿಭಾಗದ ವಿಜ್ಞಾನಿ ಡಾ. ಡಿ.ಎಚ್. ರೂಪಶ್ರೀ, ಸಹ ಸಂಶೋಧನಾ ನಿರ್ದೇಶಕ ಡಾ.ವೆಂಕಟೇಶ್, ಸಹ ವಿಸ್ತರಣಾ ನಿರ್ದೇಶಕ ಡಾ. ರಘುಪತಿ, ವಿಸ್ತರಣಾ ಮುಂದಾಳು ಡಾ.ಸಿ.ರಾಮಚಂದ್ರ, ಹೈಬ್ರೀಡ್ ಭತ್ತದ ಪ್ರಾಧ್ಯಾಪಕ ಡಾ.ಶಿವಕುಮಾರ್, ಕಾರ್ಯಕ್ರಮ ಸಹಾಯಕ ಎಚ್.ಎಂ.ಮಹೇಶ್ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೊಚ್ಚಿ ಹೋಯಿತು ಲಾಭದ ನಿರೀಕ್ಷೆಯ ಕನಸು | ಕೊರೋನಾ ಬಳಿಕ ಊರು ಸೇರಿದ್ದ ಯುವರೈತರ ಬವಣೆ

ಮಳೆಗೆ ಭಾರವಾಯ್ತು ಅನ್ನದಾತನ ಬದುಕು

ಪವಮಾನ ಐರಣಿ

ದಾವಣಗೆರೆ: ವಾಯುಭಾರ ಕುಸಿತದಿಂದ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆಗೆ ರೈತರ ಬದುಕು ಮೂರಾಬಟ್ಟೆಯಾಗಿದೆ. ಕಳೆದೆರೆಡು ದಿನಗಳಿಂದ ಮಳೆ ಬಿಡುವು ಕೊಟ್ಟಿರುವ ಹಿನ್ನೆಲೆಯಲ್ಲಿ ಅಲ್ಪಸ್ವಲ್ಪ ನಷ್ಟ ತಗ್ಗಿಸಿಕೊಳ್ಳಲು ರೈತರು ಹರಸಾಹಸ ಪಡುತ್ತಿರುವುದು ಸಾಮಾನ್ಯವಾಗಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕಳೆದ ವಾರ ಅತಿವೃಷ್ಟಿ ಅವಾಂತರ ಸೃಷ್ಟಿಸಿದ್ದು, ದಾವಣಗೆರೆ ಜಿಲ್ಲೆಯಲ್ಲೂ ವರುಣನ ಆರ್ಭಟ ಜೋರಾಗಿತ್ತು. ಬಯಲುಸೀಮೆ ಪ್ರದೇಶ ಹೊಂದಿರುವ ಜಿಲ್ಲೆಯ ಅನೇಕ ಭಾಗದಲ್ಲಿ ನಿರಂತರ ಸುರಿದ ಮಳೆಯಿಂದಾಗಿ ಮಲೆನಾಡಿನ ವಾತಾವರಣ ನಿರ್ಮಾಣವಾಗಿತ್ತು. ಮಳೆಯ ರುದ್ರನರ್ತನಕ್ಕೆ ಮನೆ ಹಾನಿ, ಬೆಳೆ ಹಾನಿ ಸಂಭವಿಸುವ ಜೊತೆಗೆ ಜನ-ಜಾನುವಾರು ಜೀವಹಾನಿಯೂ ಸಂಭವಿಸಿದೆ. ಕೇವಲ ಮೂರು ದಿನದ ಮಳೆಗೆ ನಾಲ್ಕು ಕೋಟಿಗೂ ಅಧಿಕ ನಷ್ಟ ಅಂದಾಜಿಸಿದ್ದು, ಇದರಲ್ಲಿ ಸಿಂಹಪಾಲು ಬೆಳೆ ಹಾನಿಯದ್ದಾಗಿದೆ.

ವಾಣಿಜ್ಯ ಬೆಳೆ ತೀವ್ರ ಹಾನಿ: ಜಿಲ್ಲೆಯ ದಾವಣಗೆರೆ, ಹರಿಹರ ತಾಲೂಕಿನಲ್ಲಿ ಅಧಿಕ ಬೆಳೆ ಹಾನಿಯಾಗಿದೆ. ಚನ್ನಗಿರಿ, ಹೊನ್ನಾಳಿ, ನ್ಯಾಮತಿ ತಾಲೂಕಿನಲ್ಲೂ ಸಾಕಷ್ಟು ಹಾನಿ ಸಂಭವಿಸಿದೆ. ಜಿಲ್ಲೆಯ ಸುಮಾರು ಐದು ಸಾವಿರ ಎಕರೆ ಪ್ರದೇಶದಲ್ಲಿನ ಕೃಷಿ, ತೋಟಗಾರಿಕೆ ಬೆಳೆಗಳು ಮಳೆಯಿಂದ ಹಾನಿಗೀಡಾಗಿವೆ. ಭತ್ತ, ಮೆಕ್ಕೆಜೋಳ, ರಾಗಿ, ಬಾಳೆ, ಅಡಕೆ ಬೆಳೆಗಳಿಗೆ ತೀವ್ರ ಹಾನಿಯಾಗಿದೆ. ಇದಲ್ಲದೆ ತರಕಾರಿ ಬೆಳೆಗಳೂ ಮಳೆಯ ಹೊಡೆತಕ್ಕೆ ನೆಲ ಕಚ್ಚಿವೆ. ಮೂರು ದಿನದ ಭಾರೀ ಮಳೆಗೆ ರೈತರ ಬದುಕು ಕೊಚ್ಚಿ ಹೋದಂತಾಗಿದೆ.

ಮತ್ತೊಮ್ಮೆ ನಿರುದ್ಯೋಗಿಗಳಾದ ಯುವಕರು: ದಾವಣಗೆರೆ ತಾಲೂಕಿನ ಹೆಚ್.ಕಲ್ಪನಹಳ್ಳಿಯ ಎಂಬಿಎ ಪದವೀಧರ ನಿತಿನ್ ಬೆಂಗಳೂರಿನಿಂದ ಸ್ವಗ್ರಾಮಕ್ಕೆ ಬಂದು ಕೃಷಿ ಕೈಗೊಂಡಿದ್ದರು. ತಮ್ಮ 2.5 ಎಕರೆ ಜಮೀನಿನಲ್ಲಿ ಮೆಣಸಿನಕಾಯಿ ಬೆಳೆದು ಲಾಭದ ನಿರೀಕ್ಷೆಯಲ್ಲಿದ್ದರು. ಇದೀಗ ಫಸಲಿಗೆ ಬಂದಿದ್ದ ಮೆಣಸಿನಕಾಯಿ ಬೆಳೆಯು ಮಳೆಗೆ ತುತ್ತಾಗಿ ಸಂಪೂರ್ಣ ಹಾಳಾಗಿದ್ದು, ಕೃಷಿಯಲ್ಲಿ ಸಾಧನೆ ಮಾಡುವ ವಿದ್ಯಾವಂತ ಯುವಕನ ಕನಸಿಗೆ ತಣ್ಣೀರೆರಚಿದೆ. ಸುಮಾರು 80 ಸಾವಿರ ರೂ. ಖರ್ಚು ಮಾಡಿ ಬೆಳೆ ಬೆಳೆದಿದ್ದರೂ ನಯಾಪೈಸೆ ಕೈಗೆ ಸಿಗದಂತಾಗಿದೆ. ಮಳೆಯಿಂದಾಗಿ ಮೆಣಸಿನಕಾಯಿಗಳು ಕೊಳೆತು, ನಂತರದ ಬಿಸಿಲಿಗೆ ಗಿಡದಲ್ಲೇ ಒಣಗಿವೆ. ಮನೆ ಬಳಕೆಗೂ ಉಪಯೋಗಕ್ಕೆ ಬಾರದಂತಾಗಿವೆ ಎಂದು ನಿತಿನ್ ಅಳಲು ತೋಡಿಕೊಂಡಿದ್ದಾರೆ.

ನೀರಿನಲ್ಲಿ ತೇಲಿ ಹೋದ ಬೆಳೆ: ಇದೇ ಗ್ರಾಮದ ಜಯಪ್ಪ ಎಂಬ ಕೃಷಿ ಕೂಲಿಕಾರ್ಮಿಕ ಬೇರೊಬ್ಬರ 3 ಎಕರೆ ಜಮೀನು ಗುತ್ತಿಗೆ ಪಡೆದು ಭತ್ತ ಬೆಳೆದಿದ್ದರು. ಕಟಾವಿಗೆ ಬಂದಿದ್ದ ಭತ್ತವು ಮಳೆಯ ಹೊಡೆತಕ್ಕೆ ಸಿಲುಕಿ ನೆಲ ಕಚ್ಚಿದೆ. ಬೆಳೆಗಾಗಿ ಮಾಡಿದ್ದ ಸುಮಾರು 1 ಲಕ್ಷ ರೂ. ಖರ್ಚು ನೀರಲ್ಲಿ ಹೋಮ ಮಾಡಿದಂತಾಗಿದೆ. ಆದರೂ ಮಳೆ ಬಿಡುವು ಕೊಟ್ಟಿದ್ದರಿಂದ ಅಲ್ಪಸ್ವಲ್ಪ ಬೆಳೆ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. 40 ಚೀಲ ಬರಬೇಕಿದ್ದ ಇಳುವರಿಯು ಈಗ 25 ಚೀಲದಷ್ಟು ಬರಲಿದ್ದು, ಹಾಕಿದ ಬಂಡವಾಳವೂ ಕೈ ಸೇರುವ ಖಾತ್ರಿ ಇಲ್ಲವಾಗಿದೆ. ನಮಗೆಷ್ಟೇ ನಷ್ಟವಾದರೂ ಜಮೀನು ಮಾಲೀಕರಿಗೆ ಮಾತ್ರ ಸರಿಯಾಗಿ ಹಣ ಪಾವತಿಸಬೇಕಿದೆ ಎಂದು ಜಯಪ್ಪ ಅಸಹಾಯಕತೆ ವ್ಯಕ್ತಪಡಿಸುವರು.

ದಿಗಂತ ವಿಶೇಷ

ಮಳೆ ಕೊಂಚ ಬಿಡುವು ಕೊಟ್ಟರು ಫಲವಿಲ್ಲ

ಕಳೆದ ಎರಡರಿಂದ ಮೂರು ದಿನದಿಂದ ಮೋಡ ಮುಸುಕಿದ ವಾತಾವರಣವಿದ್ದರೂ, ಮಳೆ ಕೊಂಚ ಬಿಡುವು ಕೊಟ್ಟಿದೆ. ಹೀಗಾಗಿ ರೈತರು ತಮ್ಮ ಜಮೀನಿನಲ್ಲಿ ಅಳಿದುಳಿದ ಬೆಳೆ ಕಾಪಾಡಿಕೊಳ್ಳಲು ಮುಂದಾಗಿದ್ದಾರೆ. ಫಸಲನ್ನು ಬಿಸಿಲಿನಲ್ಲಿ ಒಣಗಿಸಿ, ಸಾಧ್ಯವಾದಷ್ಟು ಇಳುವರಿ ತೆಗೆದು ನಷ್ಟ ಕಡಿಮೆಗೊಳಿಸಲು ಶ್ರಮ ಪಡುತ್ತಿದ್ದಾರೆ.

ಮಾರುಕಟ್ಟೆಯಲ್ಲಿಲ್ಲ ಬೆಲೆ

ಸಕಾಲಕ್ಕೆ ಬೆಂಬಲ ಬೆಲೆ ಘೋಷಿಸಿ ಖರೀದಿ ಕೇಂದ್ರ ತೆರೆಯದ ಕಾರಣ ಮಾರುಕಟ್ಟೆಯಲ್ಲಿ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ. ಇದರ ಜೊತೆಗೆ ಅತಿವೃಷ್ಟಿ, ಅನಾವೃಷ್ಟಿಯ ಸವಾಲಿಗೂ ಎದೆಯೊಡ್ಡಬೇಕಿದೆ. ಇನ್ನಾದರೂ ಸರ್ಕಾರ ಶಾಶ್ವತ ಖರೀದಿ ಕೇಂದ್ರ ತೆರೆದು ರೈತರ ಸಹಾಯಕ್ಕೆ ನಿಲ್ಲಬೇಕು. ವೈಜ್ಞಾನಿಕ ಸಮೀಕ್ಷೆ ನಡೆಸಿ ಬೆಳೆ ನಷ್ಟ ಪರಿಹಾರ ನೀಡಬೇಕು ಎಂಬುದು ಅನ್ನದಾತರ ಆಗ್ರಹವಾಗಿದೆ.

ಕೊರೋನಾ ಬಳಿಕ ನೆರೆ ಬಾಧೆ

ಮಹಾಂತೇಶ ಕಣವಿ

ಧಾರವಾಡ: ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಮಳೆ ತಂದೊಡ್ಡಿದ ಸಂಕಷ್ಟ ಅಷ್ಟಿಷ್ಟಲ್ಲ. ಕೊರೋನಾ ಸಂಕಷ್ಟದ ಬಳಿಕ ರೈತರು ಚೇತರಿಕೆ ಕಾಣುವ ಮುನ್ನವೇ ಈಗ ನಾಲ್ಕೈದು ದಿನಗಳ ಹಿಂದೆ ಸುರಿದ ಅಕಾಲಿಕ ಮಳೆ ರೈತರನ್ನು ಕೆಂಗೆಡಿಸಿದೆ.

ಧಾರವಾಡ ಜಿಲ್ಲೆಯೊಂದರಲ್ಲೇ ಬರೋಬ್ಬರಿ 1.05 ಲಕ್ಷ ಹೆಕ್ಟೇರ್ ಬೆಳೆ ಮಳೆಗೆ ಆಹುತಿಯಾಗಿದೆ. ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳ ವರದಿ ಪ್ರಕಾರ 96,583 ಹೆಕ್ಟೇರ್ ಪ್ರದೇಶದ ಕೃಷಿ ಬೆಳೆ ಹಾನಿ, 8,759 ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆ ಕೊಚ್ಚಿ ಹೋಗಿವೆ.

ಅದರಲ್ಲೂ ಮೆಣಸಿನಕಾಯಿ, ಹತ್ತಿ, ಭತ್ತ ಬೆಳೆದಿದ್ದ ರೈತರು, ತೋಟಗಾರಿಕಾ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.ಬೆಳೆಗೆ ವೈಜ್ಞಾನಿಕ ಬೆಲೆ ಸಿಗದೆ ಸಂಕಷ್ಟದಲ್ಲಿದ್ದ ರೈತರಿಗೆ ಅಕಾಲಿಕ ಮಳೆ ಗಾಯದ ಮೇಲೆ ಬರೆ ಎಳೆದಿದೆ. ಹತ್ತಿ ಮತ್ತು ಕೆಂಪು ಮೆಣಸಿನಕಾಯಿ ಬೆಳೆಗೆ ತೀವ್ರ ಹಾನಿ ಉಂಟಾದ ಬಗ್ಗೆ ಅಧಿಕಾರಿಗಳು ತಿಳಿಸಿದ್ದು, ಶೇಂಗಾ, ಜೋಳ, ಭತ್ತದ ಬೆಳೆಗೂ ಸಾಕಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ.

ಕುಂದಗೋಳ ಮತ್ತು ಹುಬ್ಬಳ್ಳಿ ತಾಲೂಕಿನಲ್ಲಿ 22,000 ಹೆಕ್ಟೇರ್ ಪ್ರದೇಶದ ಪೈಕಿ ಸುಮಾರು ಏಳು ಸಾವಿರ ಹೆಕ್ಟೇರ್ ಕೆಂಪು ಮೆಣಸಿನಕಾಯಿ (ಶೇ.40ರಷ್ಟು) ಬೆಳೆ ಹಾನಿಯಾಗಿದೆ. 8,759 ಹೆಕ್ಟೇರ್ ಪ್ರದೇಶದಲ್ಲಿ ಬಳೆದಿದ್ದ ಈರುಳ್ಳಿ, ಹೂವು, ಟೊಮೆಟೊ,ವಿವಿಧ ತರಕಾ ರಿಗಳು ನಷ್ಟವಾಗಿವೆ. ಸರ್ಕಾರಕ್ಕೆ ಸಲ್ಲಿಸಿದ ಸಮೀಕ್ಷಾ ವರದಿ ಪ್ರಕಾರ 11,616 ಹೆಕ್ಟೇರ್ ಹತ್ತಿ, 4,213 ಹೆಕ್ಟೇರ್ ಜೋಳ, 2,138 ಹೆಕ್ಟೇರ್ ಭತ್ತ, 755 ಹೆಕ್ಟೇರ್ ಮೆಕ್ಕೆಜೋಳ ಮತ್ತು 535 ಹೆಕ್ಟೇರ್ ಗೋಧಿ ಬೆಳೆ ಮಳೆಯಿಂದ ಸಂಪೂರ್ಣವಾಗಿ ಹಾಳಾಗಿದೆ.

> ವೈಜ್ಞಾನಿಕ ಬೆಳೆ ಹಾನಿ ಸಮೀಕ್ಷೆ ನಡೆಸಿ ಧಾರವಾಡ ಜಿಲ್ಲೆಯನ್ನು ಅತಿವೃಷ್ಟಿ ಪೀಡಿತ ಜಿಲ್ಲೆ ಎಂದು ಘೋಷಿಸಿ ಸೂಕ್ತ ಪರಿಹಾರ ನೀಡಬೇಕು. ಹೆಕ್ಟೇರ್‌ಗೆ ರೂ.50 ಸಾವಿರ ಪರಿಹಾರ ನೀಡಬೇಕು.
>
> ■ ಶ್ರೀಶೈಲಗೌಡ ಕಮತರ, ರೈತ, ಧಾರವಾಡ

> ಬೆಳೆ ಕಳೆದುಕೊಂಡ ರೈತರಿಂದ ಹಾಗೂ ಸಂಪೂರ್ಣ ನಾಶವಾಗಿರುವ ಹಾಗೂ ಭಾಗಶಃ ಕುಸಿದಿರುವ ಮನೆಗಳ ಮಾಲೀಕರಿಂದ ಮಾಹಿತಿ ಸಂಗ್ರಹಿಸಿ, ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಸರ್ಕಾರ 14.74 ಕೋಟಿ ಹಣ ಬಿಡುಗಡೆ ಮಾಡಿದೆ. ಪರಿಹಾರ ವಿತರಣೆ ಕಾರ್ಯ ನಡೆದಿದೆ.
>
> ■ ನಿತೇಶ ಪಾಟೀಲ, ಜಿಲ್ಲಾಧಿಕಾರಿ-ಧಾರವಾಡ

ನಷ್ಟದ ಪ್ರಮಾಣ: ಧಾರವಾಡ-3,455 ಹೆಕ್ಟೇರ್, ಅಳ್ನಾವರ-1,701 ಹೆಕ್ಟೇರ್, ಹುಬ್ಬಳ್ಳಿ ಗ್ರಾಮೀಣ-14,071 ಹೆಕ್ಟೇರ್, ಹುಬ್ಬಳ್ಳಿ ನಗರ-964 ಹೆಕ್ಟೇರ್, ಕಲಘಟಗಿ-4,058 ಹೆಕ್ಟೇರ್, ಕುಂದಗೋಳ-31,805 ಹೆಕ್ಟೇರ್, ನವಲಗುಂದ-31,805 ಹೆಕ್ಟೇರ್, ಅಣ್ಣಿಗೇರಿ-31,805 ಹೆಕ್ಟೇರ್ ಬೆಳೆ ನಷ್ಟ ಸಂಭವಿಸಿದೆ.

ಹೂವಿನ ಬೆಳೆಯೂ ನಾಶ: ಪ್ಪಿನಬೆಟಗೇರಿ, ಮಂಗಳಗಟ್ಟಿ, ಕುರುಬಗಟ್ಟಿಯಲ್ಲಿ ಹೂವಿನ ಬೆಳೆಗಾರರಿಗೆ ಗರಿಷ್ಠ ನಷ್ಟವಾಗಿದೆ. ಕೆಜಿಗೆ ರೂ.250 ಸಿಗುತ್ತಿದ್ದ ಮಾರಿಗೋಲ್ಡ್ ಹೂವುಗಳು ಸಂಪೂರ್ಣ ಹಾಳಾಗಿವೆ.

ತರಕಾರಿ ಬೀಜಗಳನ್ನೂ ಉತ್ಪಾದಿಸಿ

ಬೆಂಗಳೂರು : ಕರ್ನಾಟಕ ರಾಜ್ಯ ಬೀಜ ನಿಗಮ ತಳಿವರ್ಧಿತ ಬಿತ್ತನೆ ಬೀಜಗಳ ಜೊತೆಗೆ ರೈತರಿಗೆ ಲಾಭದಾಯಕವಾಗುವ ತರಕಾರಿ ಬೀಜಗಳನ್ನೂ ಉತ್ಪಾದಿಸಲಿ ಎಂದು ಕರ್ನಾಟಕ ರಾಜ್ಯ ಬೀಜ ನಿಗಮದ ಅಧ್ಯಕ್ಷರೂ ಆಗಿರುವ ಕೃಷಿ ಸಚಿವ ಬಿ.ಸಿ.ಪಾಟೀಲ್ ಸೂಚಿಸಿದ್ದಾರೆ.

ಹೆಬ್ಬಾಳದ ಕರ್ನಾಟಕ ಬೀಜ ನಿಗಮದಲ್ಲಿ ಬೀಜ ನಿಗಮದ ಅಧಿಕಾರಿಗಳು ಹಾಗೂ ಜಿಲ್ಲಾ ಉಪವ್ಯವಸ್ಥಾಪಕ ನಿರ್ದೇಶಕರೊಂದಿಗೆ ಸಭೆ ನಡೆಸಿ, ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಪೂರೈಸುವುದರ ಜೊತೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಗುಣಮಟ್ಟದ ಬೀಜ ಉತ್ಪಾದನೆಯ ಲಾಭತರುವ ನಿಗಮವಾಗಬೇಕು. ಕೇವಲ ಬಿತ್ತನೆ ಬೀಜ ಪೂರೈಸುವ ಕೆಲಸಕ್ಕೆ ಮಾತ್ರ ಸೀಮಿತವಾಗಬಾರದು ಎಂದು ಹೇಳಿದರು.

ಬೀಜ ನಿಗಮವು ತಳಿವರ್ಧಿತ ಬಿತ್ತನೆ ಬೀಜವನ್ನು ಉತ್ಪಾದಿಸುವ ಜೊತೆಗೆ ರೈತರಿಗೆ ಲಾಭ ತರುವ ಗುಣಮಟ್ಟದ ಬಿತ್ತನೆ ಬೀಜವನ್ನೂ ಸಹ ಉತ್ಪಾದಿಸುವ ನಿಗಮವಾಗಬೇಕು. ಆ ಮೂಲಕ ನಿಗಮ ದೇಶದಲ್ಲಿಯೇ ಲಾಭದಾಯಕ ನಿಗಮವಾಗಬೇಕು. ರೈತರ ಹಿತದೃಷ್ಟಿಯಿಂದ ತರಕಾರಿ ಬಿತ್ತನೆ ಬೀಜಗಳನ್ನು ಸಹ ರಾಜ್ಯ ಬೀಜ ನಿಗಮ ಉತ್ಪಾದಿಸಿ ಮಾರಾಟ ಮಾಡಬೇಕು. ಇದಕ್ಕೆ ಅಗತ್ಯವಾದ ಕೌಶಲ್ಯ ತರಬೇತಿ ವೃತ್ತಿಪರತೆಯನ್ನು ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರು ಹೊಂದಬೇಕು. ಆ ಮೂಲಕ ಕರ್ನಾಟಕ ತೈಲ ನಿಗಮದಂತೆ ಬೀಜ ನಿಗಮವು ಸಹ ಲಾಭದಾಯವಾಗಬೇಕು ಎಂದು ಸೂಚನೆ ನೀಡಿದ್ದಾರೆ.



ಬೆಂಗಳೂರಿನ ಹೆಬ್ಬಾಳದ ಕರ್ನಾಟಕ ಬೀಜ ನಿಗಮದಲ್ಲಿ ಬೀಜ ನಿಗಮದ ಅಧಿಕಾರಿಗಳು ಹಾಗೂ ಜಿಲ್ಲಾ ಉಪವ್ಯವಸ್ಥಾಪಕ ನಿರ್ದೇಶಕರೊಂದಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಸಭೆ ನಡೆಸಿದರು.

25-11-2021 Uv Pg 05

25-11-2021 Dec Hrd Pg 04

Farm distress: Bommai under pressure to waive crop loans

Experts say loan waivers are "bad economics"

BHARATH JOSHI
BENGALURU, DHNS

Chief Minister Basavaraj Bommai is under pressure from farmers to waive their loans, which they say will cushion the stress in the agriculture sector amplified by heavy crop losses due to floods.

In November alone, heavy rains have damaged crops spread across 5.81 lakh hectares, according to preliminary government data. This figure is higher, some argue.

The Chief Minister's Office (CMO) is flooded with representations by farmers asking for their crop loans to be waived.

"Many farmers who are eligible for incentive under the (2018) Crop Loan Waiver Scheme (CLWS) are representing for waiver of the loans even after their crop loan accounts are credited with the incentive amount. Some farmers whose loan accounts were not eligible under the CLWS and hence rejected by the branch managers are also representing to government for waiver of their crop loans (sic)," the Finance Department stated in a letter to the State Level Bankers' Committee recently.

If Bommai bites the bullet, he will be the fifth consecutive chief minister to waive loans, starting with Jagadish Shettar, Siddaramaiah, H D Kumaraswamy and B S Yediyurappa (he waived loans of fishermen in 2019).

"At least those farmers who have lost their crops should be given a loan waiver," farmer leader Kuruburu Shantkumar told *DH*.

According to him, crops on 8-10 lakh hectares have been lost. "Farmers borrowed crop loans. How will they repay with their crops destroyed," he asked. Pointing out that the Centre's crop insurance isn't of much help as it doesn't cover all crops, Shantkumar said: "Just like how industries get help when they're in distress, the government should protect farmers."

Much as Bommai would like to play the populist CM, he faces constraints as the finance minister. Understandably, the Finance department (FD) is against a fresh loan waiver as that will dent the state's coffers. "A fresh loan waiver isn't under discussion, and shouldn't be," a senior FD official said.

The last crop loan waiver, in 2018 when the Congress-JD(S) coalition was in power, cost the government Rs 15,597 crore.

Experts say loan waivers are "bad economics" that should be avoided. "It will lead to a revenue deficit and it'll be very difficult to come back from that," Madhusudhan B V Rao, senior research advisor at the Centre for Budget and Policy Studies, said.

Among the signs of farm distress in Karnataka is the rising agricultural NPAs: from Rs 17,571 crore in September 2019 to Rs 18,185 crore in September 2021.



In November alone, heavy rains have damaged crops spread across 5.81 lakh hectares, according to preliminary government data. DH FILE PHOTO

DID YOU KNOW?



Some bees eat meat

A little-known species of tropical bee, nicknamed vulture bees, has evolved an extra tooth for biting flesh and a gut that more closely resembles that of vultures rather than other bees. Typically, bees don't eat meat. However, a species of stingless bee in the tropics has evolved the ability to do so, presumably due to intense competition for nectar.

Honeybees, bumblebees, and stingless bees have guts that are colonised by the same five core microbes. "Unlike humans, whose guts change with every meal, most bee species have retained these same bacteria over roughly 80 million years of evolution," said Jessica Maccaro, an entomology doctoral student.

Normally, stingless bees have baskets on their hind legs for collecting pollen. However, the team observed carrion-feeding bees using those same structures to collect the bait. "They had little chicken baskets," said Quinn McFrederick, a UCR entomologist.

"The vulture bee microbiome is enriched in acid-loving bacteria, which are novel bacteria that their relatives don't have," McFrederick said. "These bacteria are similar to ones found in actual vultures, as well as hyenas and other carrion-feeders, presumably to help protect them from pathogens that show up on carrion."

One of the bacteria present in vulture bees is Lactobacillus, which is in a lot of humans' fermented food, like sourdough. They were also found to harbor Carnobacterium, which is associated with flesh digestion.

In addition, though they feed on meat, their honey is reportedly still sweet and edible. "They store the meat in special chambers that are sealed off for two weeks before they access it, and these chambers are separate from where the honey is stored," Maccaro said.

Phys.org

ಕಾಯಿದೆ ವಾಪಸು; ನಿಜವಾಗಿ ಸೋತವ ರೈತ!

130 ಕೋಟಿ ಜನರ ದೇಶದಲ್ಲಿ ಶೇ. 50ಕ್ಕಿಂತ ಹೆಚ್ಚು ಕೃಷಿ ಅವಲಂಬಿಸಿರುವಾಗ ಕಾಲಕಾಲಕ್ಕೆ ಸುಧಾರಣೆಯಾಗದೇ ಅನ್ನದಾತ ಸಂಕಷ್ಟ ಬಗೆಹರಿಯುವುದು ದುಸ್ತರ. ಹಿಡಿಯಷ್ಟು ಜನರ ಮತ್ತು ಅಧಿಕಾರ ವಂಚಿತರ ಸ್ವಾರ್ಥಕ್ಕೆ ರೈತನನ್ನು ದಾಳವಾಗಿ ಬಳಸಿಕೊಂಡಿದ್ದಾರೆ. ನಿಜಕ್ಕೂ ಇವರು ರೈತ ವಿರೋಧಿಗಳಲ್ಲವೇ?

ಸಕಾಲಿಕ
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಪಿ.ವಿ.ನರಸಿಂಹರಾವ್ ಅವರು 1991ರಲ್ಲಿ ಪ್ರಧಾನಿಯಾಗಿದ್ದಾಗ ಆರ್ಥಿಕ ಸುಧಾರಣೆ ಕೈಗೊಳ್ಳದಿದ್ದರೆ ಭಾರತ ಇಂದಿಗೂ ಹಿಂದುಳಿದ ರಾಷ್ಟ್ರಗಳ ಪಟ್ಟಿಯಲ್ಲಿಯೇ ಇರುತ್ತಿತ್ತೇನೊ?

89ರಿಂದ ಸತತವಾದ ಅತಂತ್ರ ಸರ್ಕಾರಗಳಿಂದ ದೇಶ ನಲುಗಿ ಹೋಗಿತ್ತು. ಆರ್ಥಿಕ ಪರಿಸ್ಥಿತಿಯು ದಿವಾಳಿಯಂಚಿಗೆ ತಲುಪಿತ್ತು. Balance of Payment ಸಮಸ್ಯೆ ಗಂಭೀರವಾಗಿತ್ತು. ದೇಶದಲ್ಲಿ ಎರಡು ವಾರಗಳಿಗೆ ಮಾತ್ರ ಆಮದಿಗೆ ವಿದೇಶಿ ವಿನಿಮಯ ಲಭ್ಯವಿದ್ದಿದ್ದು. ಯಾವುದೇ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಾರತಕ್ಕೆ ಸಾಲ ನೀಡಲು ಸಿದ್ಧವಿರಲಿಲ್ಲ. ಪರಿಸ್ಥಿತಿಯ ತುರ್ತು ನಿರ್ವಹಣೆಗೆ ದೇಶದ 67 ಟನ್ ಚಿನ್ನವನ್ನು ವಿದೇಶಿ ಬ್ಯಾಂಕ್‌ಗಳಲ್ಲಿ ಅಡವಿಡಬೇಕಾದ ಶೋಚನೀಯ ಪರಿಸ್ಥಿತಿಗೆ ಭಾರತ ತಲುಪಿತ್ತು.

ಆರ್ಥಿಕ ಸಂಕಷ್ಟದಿಂದ ಪಾರಾಗಲು 1991ರಲ್ಲಿ ಪಿ.ವಿ.ನರಸಿಂಹರಾವ್, ಆರ್ಥಿಕ ಉದಾರೀಕರಣ ನೀತಿಯನ್ನು ದಿಟ್ಟತನದಿಂದ ಜಾರಿಗೆ ತಂದರು. ಒಮ್ಮೆಗೆ ದೇಶದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಕೆಂಪುಗಂಬಳಿಯನ್ನು ಹಾಸಲಾಯಿತು. ಖಾಸಗಿ ಬಂಡವಾಳ ಸ್ನೇಹಿ ನೀತಿ ಬಂದಿತು. ಹಲವಾರು ಕ್ಷೇತ್ರಗಳು ಖಾಸಗಿಯವರಿಗೆ ತೆರೆದುಕೊಂಡಿತು. ಕೇಂದ್ರದ ಈ ಉದಾರೀಕರಣ ನೀತಿಯನ್ನು ಅಂದಿನ ಪ್ರತಿ ಪಕ್ಷಗಳು ತೀವ್ರ ವಿರೋಧಿಸಿದ್ದವು. ದೇಶವನ್ನು ಖಾಸಗಿ ಸಂಸ್ಥೆಗಳಿಗೆ ಮಾರಲಾಗುತ್ತಿದೆ, ವಿದೇಶಿ ಬಂಡವಾಳಕ್ಕೆ ಅನುಮತಿ ನೀಡಿ ಭಾರತೀಯ ಉದ್ದಿಮೆಗಳ ಚರಮಗೀತೆ ಹಾಡಲಾಗುತ್ತಿದೆ, ಹೊಸ ರೂಪದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಹಿಂಬಾಗಿಲಿನಿಂದ ಪ್ರವೇಶಿಸುತ್ತಿದೆ ಎಂಬಿತ್ಯಾದಿ ಟೀಕೆಗಳು ಬಿಜೆಪಿ ಸೇರಿ ಲ್ಲರಿಂದ ವ್ಯಕ್ತವಾಗಿತ್ತು.

ಅದಾಗಿ 30ವರ್ಷ ಕಳೆದಿವೆ. ಈ ಅವಧಿಯಲ್ಲಿ ಎಲ್ಲ ರಂಗದಲ್ಲಿಯೂ ಪ್ರಗತಿ ಸಾಧಿಸಿದ್ದೇವೆ. ಭಾರತೀಯ ಉದ್ದಿಮೆಗಳು ವಿದೇಶಿ ಬಂಡವಾಳದಿಂದ ಬಲವಾದುವೇ ವಿನಹ ಬಾಗಿಲು ಹಾಕಿಲ್ಲ. ಉದಾರೀಕರಣದ ಫಲವಾಗಿ ಭಾರತೀಯ ಬಹುರಾಷ್ಟ್ರೀಯ ಕಂಪನಿಗಳು ಬೆಳೆದಿವೆ. ಹರಿದು ಬಂದ ವಿದೇಶಿ ಬಂಡವಾಳದ ಕಾರಣ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಸ್ಥಿತಿಯು ಸುಧಾರಿಸಿತು.

96ರ ನಂತರ ಬಂದ ಎಲ್ಲ ಸರಕಾರಗಳು ಆರ್ಥಿಕ ಉದಾರೀಕರಣಕ್ಕೆ ಒತ್ತು ನೀಡಿರುವುದೇ ಹೊರತು ಅದನ್ನು ಹಿಂಪಡೆಯಲಿಲ್ಲ. ವಾಜಪೇಯಿ ಸರ್ಕಾರದಲ್ಲಿ ಬಂಡವಾಳ ಹಿಂತೆಗತಕ್ಕೆ ಪ್ರತ್ಯೇಕ ಸಚಿವಾಲಯವನ್ನೆ ತೆರೆಯಲಾಗಿತ್ತು. ತತ್ಪರಿಣಾಮ ಸರ್ಕಾರದ ಹಲವಾರು ಬಿಳಿ ಆನೆ ಉದ್ದಿಮೆಗಳು ಮಾರಾಟವಾಗಿ ತೆರಿಗೆ ಹಣದ ಪೋಲಿಗೆ ತಡೆಯಾಯಿತು. 1991ರ ಆರ್ಥಿಕ ಉದಾರೀಕರಣದ ಲಾಭವು ಕೇವಲ ನಗರ ಪ್ರದೇಶಗಳಿಗೆ ಸಿಮೀತವಾಗಿತ್ತು. ಗ್ರಾಮೀಣ ಭಾರತ ಇದರಿಂದ ಪ್ರಯೋಜನ ಪಡೆಯಲಿಲ್ಲ. ಕೃಷಿ ಆಧಾರಿತ ಚಟುವಟಿಕೆಯ ಕೇಂದ್ರವಾಗಿದ್ದ ಹಳ್ಳಿಗಳಿಗೆ ಉದಾರೀಕರಣದ ಲಾಭವು ತಲುಪಲಿಲ್ಲ. ಕೃಷಿ ಕ್ಷೇತ್ರವು ಸುಧಾರಣೆಯಿಲ್ಲದೆ ಸೊರಗವುದು ಮುಂದುವರಿಯಿತು.

ಇಂದಿಗೂ ಬೆಳೆ ಕೈಕೊಟ್ಟು ಬೆಳದ ಬೆಳೆಗೆ ಸೂಕ್ತ ಬೆಲೆ ದೊರೆಯದೆ ಸಾಲದ ಶೂಲಕ್ಕೆ ಸಿಲುಕಿ ಲಕ್ಷಕ್ಕೆ ಶೇಕಡಾ 1.4 ರಿಂದ 1.8 ರೈತರು ದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆಡಳಿತ ನಡೆಸುವ ಸರಕಾರಗಳಿಗೆ ಸಾಲಮನ್ನಾ ಬಡ್ಡಿ ಮನ್ನಾ, ತಾತ್ಕಾಲಿಕ ಪರಿಹಾರ ಧನ ಮತ್ತು ಬೆಂಬಲ ಬೆಲೆಗೆ ಒತ್ತಾಯಿಸುವುದು ಹೊರತು ಪಡಿಸಿ ಅವರ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳುವ ಚಿಂತನೆಯೇ ಇಲ್ಲ. ರೈತರ ಆದಾಯ ದ್ವಿಗುಣ ಮಾಡುವ ಬಿಜೆಪಿ ಸರಕಾಖದ ವಾಗ್ದಾನ ಹಾಲಿ ಪರಿಸ್ಥಿತಿಯಲ್ಲಿ ಕೈಗೊಡಲು ಆಮೂಲಾಗ್ರ ಬದಲಾವಣೆ ಬೇಕಾಗಿತ್ತು. ರೈತ ತನ್ನ ಬೆಳೆಯನ್ನು ಸ್ಪರ್ಧಾತ್ಮಕವಾಗಿ ಮಾರಾಟ ಮಾಡಲು APMC ಯಲ್ಲದೆ ನೇರವಾಗಿ ತನಗೆ ಹೆಚ್ಚಿನ ಬೆಲೆ ದೊರೆಯುವ ಕಡೆ ಮಾರಾಟ ಮಾಡುವುದಕ್ಕೆ ಅವಕಾಶ ಬೇಕಿತ್ತು. ಮಾರುಕಟ್ಟೆಯ ಅನಿಶ್ಚಿತತೆಯ ಅಪಾಯ ತಡೆಯಲು ಮಧ್ಯವರ್ತಿಗಳ ಹಾವಳಿ ಇಲ್ಲದೆ ಬಿತ್ತನೆಗೆ ಮುನ್ನವೇ ಪೂರ್ವನಿರ್ಧರಿತ ಬೆಲೆಯೊಂದಿಗೆ ಖರೀದಿದಾರನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಖಾಸಗಿ ಮತ್ತು ವಿದೇಶಿ ಬಂಡವಾಳ ಹೂಡಿಕೆ ಉತ್ತೇಜನ ನೀಡಲು ಕೃಷಿ ತಿದ್ದಪಡಿ ಕಾಯ್ದೆ ಜಾರಿಗೆ ತರಲಾಗಿತ್ತು.

ಆದರೆ ಇದರ ವಿರುದ್ಧ ನಡೆದ ಅಪ್ರಚಾರದಿಂದ ಇದೊಂದು ರೈತ ವಿರೋಧಿ ಕಾಯಿದೆ ಎಂದು ಬಿಂಬಿಸಲಾಯಿತು. ವಿಶೇಷವಾಗಿ ಪಂಜಾಬ್, ಹರ್ಯಾಣ ಮತ್ತು ಉತ್ತರಪ್ರದೇಶದ ಕೆಲವು ಭಾಗದ ರೈತರು ಕಾಯಿದೆ ವಿರೋಧಿಸಿ ಪ್ರಬಲವಾದ ಪ್ರತಿಭಟನೆ ಕೈಗೊಂಡರು. ಅಂತಿಮವಾಗಿ ಕೇಂದ್ರ ಸರ್ಕಾರ ಕಾಯಿದೆಯನ್ನು ಹಿಂಪಡೆಯ ಬೇಕಾಯಿತು. ಹಿಂಪಡೆಯುವಾಗ ರೈತರಿಗಾಗಿ ಕಾಯಿದೆ ತರಲಾಯಿತು; ದೇಶಕ್ಕಾಗಿ ಅವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಮಾರ್ಮಿಕವಾಗಿ ಮೋದಿಯವರು ಹೇಳಿರುವುದು ಗಮನಾರ್ಹ.

ಕೃಷಿ ಕ್ಷೇತ್ರದಲ್ಲಿ ಅತ್ಯಗತ್ಯವಾಗಿ ಬೇಕಾಗಿರುವ ಸುಧಾರಣೆಯು ಇಂದು ಸರ್ಕಾರ ಕಾರ್ಯ ರೂಪಕ್ಕೆ ತರಲು ಸಾಧ್ಯವಾಗಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ನಿಂತನೀರಾಗುವುದಕ್ಕೆ ಹಠ ಹಿಡಿದು ರೈತಾಪಿ ವರ್ಗದ ಹಿತಕ್ಕೆ ಧಕ್ಕೆ ತಂದಿದ್ದಾರೆ. ಒಂದು ವರ್ಷದಿಂದ ಸಾಗಿದ್ದ ರೈತ ಹೋರಾಟವನ್ನು ಕೊನೆಗಾಣಿಸಲು ಹಲವು ಸುತ್ತಿನ ಮಾತುಕತೆ ರೈತ ಸಂಘ ಮತ್ತು ಸರ್ಕಾರದ ನಡುವೆ ನಡೆಯಿತು.

APMC ಕಾಯಿದೆ ತಿದ್ದುಪಡಿಯನ್ನು ತಂದು ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಲು ಅನುವು ಮಾಡಿಕೊಟ್ಟಿವೆ. ತತ್ಪರಿಣಾಮ ನಮ್ಮ ರಾಜ್ಯದಲ್ಲಿಯೇ ಹತ್ತಾರು ಅಕಖಇ ಖಾಲಿ ಕೂತಿವೆ. ಅಕಖಇ ಯಲ್ಲಿ ಮಾರಾಟ ಮಾಡಿದರೆ ಸೆಸ್ ನೀಡಬೇಕು ಮಧ್ಯವರ್ತಿಗಳ ಕಾಟ ಇದರಿಂದ ಬೆಸತ್ತಿದ್ದ ರೈತ ನೇರವಾಗಿ ಉತ್ಪನ್ನಗಳನ್ನು ಮಾರಾಟ ಮಾಡಿ ಎಲ್ಲ ರೀತಿಯ ಉಪಯುಕ್ತತೆಯನ್ನು ತಿಳಿಸಲಾಯಿತು ಆದರೆ ಯಾವ ಸಂಧಾನ ಸಲಹೆಗೆ ಜಗ್ಗದೆ ತಮ್ಮ ಹಠ ಸಾಧಿಸಿಕೊಂಡಿದ್ದಾರೆ.

ಕಳೆದ ಒಂದು ವರ್ಷದಿಂದ ಬಿಜೆಪಿಯ ಶಾಸಕರು ಲೋಕಸಭಾ ಸದಸ್ಯರು ಮತ್ತು ರಾಜ್ಯ ಸರ್ಕಾರಗಳು ರೈತರನ್ನು ಮನವೂಲಿಸುವ ಮತ್ತು ಕೃಷಿ ಕಾಯಿದೆಯ ಲಾಭವನ್ನು ತಿಳಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ವೋಟು ಪಡೆದು ಗದ್ದುಗೆ ಹಿಡಿಯಲು ಮೋದಿಯವರ ಜಪ ಮಾಡುವವರು ಮೋದಿಯವರ ಈ ಸುಧಾರಣಾ ಕೆಲಸಕ್ಕೆ ಬೆಂಬಲವಾಗಿ ನಿಂತು ರೈತರಿಗೆ ಮನವರಿಕೆ ಮಾಡಿಕೊಡಲು ಆಸಕ್ತಿವಹಿಸಲಿಲ್ಲ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ರೈತರನ್ನು ಭೇಟಿಯಾಗಿ ಅವರ ಅಹವಾಲು ಆಲಿಸಿ ಸಂದೇಹ ಬಗೆಹರಿಸುವ ಕೆಲಸ ಮಾಡಬೇಕಿತ್ತು. ಗುಂಪು ಸಭೆಗಳ ಮೂಲಕ ಕಾಯಿದೆ ವಿವರ ನೀಡಬಹುದಿತ್ತು. ಆದರೆ ಆಡಳಿತ ಪಕ್ಷದವರು ಈ ಸಕಾರಾತ್ಮಕ ಚಟುವಟಿಕೆಯ ತಂಟೆಗೆ ಹೋಗಲೇ ಇಲ್ಲ.

ಅನೇಕ ರಾಜ್ಯ ಸರ್ಕಾರಗಳು ಈಗಾಗಲೇ ಅದನ್ನು ಉಳಿಸುತ್ತಿದ್ದಾರೆ. ಈಗಾಗಲೇ ಇದರ ಲಾಭವನ್ನು ಪಡೆದಿರುವ ರೈತರ ಮೂಲಕ ಪ್ರಚಾರ ಕೈಗೊಳ್ಳಬೇಕಾಗಿತ್ತು. ಅವರ ಅನುಭವ ಇತರರಿಗೆ ತಲುಪುವಂತೆ ಮಾಡಬೇಕಿತ್ತು. ಆದರೆ ಪಕ್ಷ ಮತ್ತು ಜನಪ್ರತಿನಿಧಿಗಳು ಸೋತರು.

APMC ವ್ಯವಸ್ಥೆಯು ಅತ್ಯಂತ ಭ್ರಷ್ಟವಾಗಿದೆ. ದಲ್ಲಾಳಿಗಳು ಶೋಷಣೆ ಮಾಡುತ್ತಾರೆ ಎಂದು ರೈತರೆ ದೂರುತ್ತಾರೆ. ಅಕಖಇ ಅಧ್ಯಕ್ಷರ ಚುನಾವಣೆಯಲ್ಲಿ ಹಣದ ಹೊಳೆಯೇ ಹರಿಯುತ್ತದೆ. ಲಾಭವಿಲ್ಲದೆ ಲಕ್ಷಗಟ್ಟಲೆ ಹಣ ವೆಚ್ಚ ಮಾಡುತ್ತಾರಾ? ಗೆದ್ದಮೇಲೆ ಲಾಭ ಪಡೆಯುವುದು ರೈತರನ್ನು ಏಮಾರಿಸಿಯೇ. ಈ ಎಲ್ಲ ಅನಿಶ್ಚಿತತೆ ಕೊನೆಗಾಣಿಸಿ ರೈತರ ಉತ್ಪನ್ನಗಳಿಗೆ ಹೆಚ್ಚಿನ ದರ ದೊರೆಯುವ ಪರ್ಯಾಯ ಮಾರ್ಗವನ್ನು ಇಂದು ರಾಜಕೀಯ ಕಾರಣಗಳಿಗೆ ರದ್ದಾಗುವಂತೆ ಮಾಡಿರುವುದು ಕೃಷಿ ಕ್ಷೇತ್ರದಲ್ಲಿ ಸುಧಾರಣೆಗೆ ಮಾರಣಾಂತಿಕ ಪೆಟ್ಟನ್ನು ನೀಡಿದ್ದಾರೆ.

ಕಾಯಿದೆಯಲ್ಲಿನ ದೋಷಗಳನ್ನು ಮತ್ತು ಬೇಕಾದ ತಿದ್ದುಪಡಿಯ ಕುರಿತು ಮಾತುಕತೆ ಮಾಡದೆ ಕಾಯಿದೆ ರದ್ದು ಪಡಿಸಿ ಎಂದು ಬೋರ್ಡ್ ಹಿಡಿದುಕೊಂಡು ಕೂತರೆ ಇವರ ಉದ್ದೇಶ ರೈತರ ಹಿತ ಕಾಪಾಡುವುದಾ ಎಂಬ ಅನುಮಾನ ಬಾರದಿರಲಿಲ್ಲ. ಕಾಯಿದೆಯು ಹಿಂಪಡೆದಿರುವುದು ಖಂಡಿತವಾಗಿ ಮೋದಿ ಸರ್ಕಾರದ ಸೋಲಲ್ಲ ಬದಲಿಗೆ ಪ್ರಾಮಾಣಿಕ ರೈತರ ಸೋಲಾಗಿದೆ ಅವರ ಬದುಕು ಹಸನಾಗುವ ಬದಲಾವಣೆಗೆ ತಡೆಯೊಡ್ಡಿ ಅವರ ಆದಾಯಕ್ಕೆ ಹೊಡತ ನೀಡಿದ್ದಾರೆ. ಇದರಿಂದ ರೈತರ ಸಂಕಷ್ಟಕ್ಕೆ ಪರಿಹಾರ ಮತ್ತೆ ಮರೀಚಿಕೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ಹೇಗೆ ರೈತರ ಬದುಕು ಹಸನುಗೊಳಿಸುತ್ತಾರೆ ಎಂಬುದಕ್ಕೆ ರೈತ ನಾಯಕರ ಬಳಿ ಉತ್ತರವಿಲ್ಲ. ಹಾಗೆ ನೋಡಿದರೆ ಇವರ ಬಳಿ ಯಾವುದೆ ಪರ್ಯಾಯವಾದ ಪರಿಹಾರ ಇರುವಂತೆ ಕಂಡುಬಂದಿಲ್ಲ ಇದ್ದಿದ್ದರೆ ಸಲಹಾತ್ಮಕ ರೂಪದಲ್ಲಿ ಸರ್ಕಾರಕ್ಕೆ ನೀಡಿ ರೈತರ ಬಗ್ಗೆ ತಮಗಿರುವ ಪ್ರಾಮಾಣಿಕ ಕಾಳಜಿಯನ್ನು ತೋರಬೇಕಿತ್ತು.

ರೈತಸಂಘದವರು ಈಗ ತಮ್ಮ ಹೋರಾಟ ಕೊನೆಗಾಣಿಸಲು ಮತ್ತೆ 6 ಶರತ್ತುಗಳನ್ನು ಇಟ್ಟಿದ್ದಾರೆ ಆದರೆ ಒಂದಾದರು ರೈತರ ಹಿತ ಕಾಪಾಡುವ ಬೇಡಿಕೆಯೇ ಅಲ್ಲ. ರಾಜಕೀಯ ಪ್ರೇರಿತ ಮತ್ತು ಕಾರ್ಯಸಾಧುವಲ್ಲದ ಬೇಡಿಕೆ ಮೂಲಕ ಸರ್ಕಾರವನ್ನು ಮಣಿಸಬಹುದು ಎಂದು ಮತ್ತೊಂದು ಸಂಘರ್ಷಕ್ಕೆ ಸಿದ್ಧವಾಗಿದ್ದಾರೆ.

91ರಲ್ಲಿ ಜಾರಿಗೆ ಬಂದ ಆರ್ಥಿಕ ಉದಾರೀಕರಣ ನೀತಿಯನ್ನು ವಿರೋಧದ ಕಾರಣ ಹಿಂಪಡೆದಿದ್ದರೆ ಇಂದು ದೇಶ ಇಷ್ಟು ಪ್ರಗತಿಯಾಗಲು ಸಾಧ್ಯವಾಗುತ್ತಿತ್ತಾ? ತದ ನಂತರ ಬಂದ ಸರ್ಕಾರಗಳು ಉದಾರೀಕರಣ ನೀತಿಯನ್ನು ಬೆಂಬಲಿಸಿದ ಕಾರಣ ಭಾರತ ತಡವಾಗಿಯಾದರು ನಿಶ್ಚಿತವಾಗಿ ವಿಶ್ವದ ಆರ್ಥಿಕ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಿದೆ.

ಆಡಳಿತ ನಡೆಸುವವರು ಜನರ ಹಿತಕ್ಕಾಗಿ ಸುಧಾರಣೆ ತಂದಾಗ ಅದರಿಂದ ತಮಗೆ ಚುನಾವಣೆಯಲ್ಲಿ ಹಿನ್ನಡೆಯಾಗುತ್ತದೆ ಎಂದಾಗ ತಮ್ಮ ಉಳಿವಿಗಾಗಿ ಮತ್ತೆಂದು ಸುಧಾರಣೆ ತರಲು ಮುಂದಾಗುವುದಿಲ್ಲ ಇದರಿಂದ ನಷ್ಟವಾಗುವುದು ಜನರಿಗೆ. ಒಂದಂತೂ ನಿಶ್ಚಿತ ಬಹುಬೇಗ ರೈತರಿಗೆ ಈ ಸತ್ಯ ಅರಿವಾಗುವುದರಲ್ಲಿ ಯಾವ ಸಂದೇಹವಿಲ್ಲ.

25-11-2021 Hd Pg 03

3 ಕೃಷಿ ಕಾಯ್ದೆ ಹಿಂಪಡೆವ ಮಸೂದೆಗೆ ಸಂಪುಟ ಅಸ್ತು

ಚಳಿಗಾಲದ ಅಧಿವೇಶನದಲ್ಲಿ ಮಂಡನೆ | ರೈತರ ಬೇಡಿಕೆ ಈಡೇರಿಕೆ

• **ಪಿಟಿಐ** ನವದೆಹಲಿ

ವಿವಾದಿತ 3 ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಇದರಿಂದಾಗಿ ರೈತರ ಪ್ರಮುಖ ಬೇಡಿಕೆಗಳಲ್ಲಿ ಒಂದಾದ ಕಾಯ್ದೆ ಹಿಂಪಡೆತ ಬೇಡಿಕೆಯನ್ನು ಈಡೇರಿಸುವತ್ತ ಮತ್ತೊಂದು ಪ್ರಮುಖ ಹೆಜ್ಜೆ ಇರಿಸಿದಂತಾಗಿದೆ.

ರದ್ದಾಗಲಿರುವ ಕಾಯ್ದೆಗಳು

1. **ರೈತ ಉತ್ಪನ್ನಗಳ ವಾಣಿಜ್ಯ ವ್ಯವಹಾರ ಕಾಯ್ದೆ-2020**
ಎಲ್ಲ ರಾಜ್ಯಗಳ ಎಪಿಎಂಸಿ ಕಾಯ್ದೆ ರದ್ದು. ಎಪಿಎಂಸಿಯಿಂದ ಹೊರಗೂ ತಾವು ಬೆಳೆದ ಉತ್ಪನ್ನಗಳನ್ನು ಮಾರಟ ಮಾಡಲು ರೈತರಿಗೆ ಈ ಕಾಯ್ದೆಯಡಿ ಅವಕಾಶ ಸಿಗುತ್ತಿತ್ತು.
2. **ಬೆಲೆ ಖಾತ್ರಿ ಮತ್ತು ಕೃಷಿ ಸೇವೆಗಳಿಗೆ ರೈತ ಒಪ್ಪಂದ ಕಾಯ್ದೆ-2020**
ಗುತ್ತಿಗೆ ಕೃಷಿ ಒಪ್ಪಂದಕ್ಕೆ ಕಾನೂನು ಚೌಕಟ್ಟು ಕಲ್ಪಿಸಿ, ಖರೀದಿದಾರನ ಜತೆ ಬಿತ್ತನೆಗೂ ಮೊದಲೇ ಬೆಲೆ ನಿಗದಿಗೆ ಅವಕಾಶ ಒದಗಿಸುವುದು
3. **ಅಗತ್ಯ ವಸ್ತುಗಳ (ತಿದ್ದುಪಡಿ) ಕಾಯ್ದೆ-2020**
ಅತ್ಯಂತ ಗಂಭೀರ ಪರಿಸ್ಥಿತಿ ಹೊರತುಪಡಿಸಿ ಉಳಿದ ಸಂದರ್ಭದಲ್ಲಿ ಯಾವುದೇ ಕೃಷಿ ಉತ್ಪನ್ನದ ಸಂಗ್ರಹದ ಮೇಲೆ ಮಿತಿ ಹೇರುವಂತಿರಲಿಲ್ಲ

'ಕೃಷಿ ಕಾಯ್ದೆ ಹಿಂತೆಗೆತ ಮಸೂದೆ-2021'ಕ್ಕೆ ಸಂಪುಟ ಅಸ್ತು ಎಂದಿದ್ದು, ನ.29ರಂದು ಆರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡನೆ ಆಗಲಿದೆ ಎಂದು ಸಂಪುಟ ಸಭೆ ಬಳಿಕ ಕೇಂದ್ರ ವಾರ್ತಾ ಸಚಿವ ಅನುರಾಗ್ ಠಾಕೂರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಸೂದೆಯನ್ನು ಸಂಸತ್ ಅಧಿವೇಶನದ ಮೊದಲ ದಿನವೇ ಉಭಯ ಸದನಗಳಲ್ಲೂ ಮಂಡಿಸಿ ಅಂಗೀಕರಿಸುವ ಉದ್ದೇಶದಲ್ಲಿ ಸರ್ಕಾರ ಇದೆ ಎನ್ನಲಾಗುತ್ತಿದೆ.

ಈ ವಿವಾದಿತ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಕಳೆದ ಶುಕ್ರವಾರ ಗುರುನಾನಕ ಜಯಂತಿ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಕಟಿಸಿದ್ದರು. ಆದರೆ ಸಂಪುಟದಲ್ಲಿ ಇವುಗಳ ಅಂಗೀಕಾರ ಆಗಬೇಕು ಹಾಗೂ ಸಂಸತ್ತಿನಲ್ಲಿ ಅಧಿಕೃತವಾಗಿ ಕಾಯ್ದೆ ರದ್ದುಪಡಿಸಬೇಕು ಎಂದು ರೈತ ಸಂಘಟನೆಗಳು ಪಟ್ಟು ಹಿಡಿದಿದ್ದವು. ಈ ಕಾಯ್ದೆಗಳ ವಿರುದ್ಧದ ಹೋರಾಟಕ್ಕೆ ಶುಕ್ರವಾರ 1 ವರ್ಷ ತುಂಬಲಿದೆ.

25-11-2021 Kp Pg 09

ತಳಿವರ್ಧಿತ ಬಿತ್ತನೆ ಬೀಜ ಉತ್ಪಾದನೆ

ಬೆಂಗಳೂರು: ರಾಜ್ಯ ಬೀಜ ನಿಗಮ ತಳಿವರ್ಧಿತ ಬಿತ್ತನೆ ಬೀಜಗಳ ಜೊತೆಗೆ ರೈತರಿಗೆ ಲಾಭದಾಯಕ ವಾಗುವ ತರಕಾರಿ ಬೀಜಗಳನ್ನೂ ಉತ್ಪಾದಿಸಲಿ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಸೂಚಿಸಿದರು.

ಹೆಬ್ಬಾಳದಲ್ಲಿರುವ ಕರ್ನಾಟಕ ಬೀಜ ನಿಗಮ ಸಂಸ್ಥೆಯಲ್ಲಿ ನಿಗಮದ ಅಧಿಕಾರಿಗಳು ಹಾಗೂ ಜಿಲ್ಲಾ ಉಪ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಬುಧವಾರ ಸಭೆ ನಡೆಸಿ ಅವರು ಮಾತನಾಡಿದರು. ರೈತರಿಗೆ ಗುಣಮಟ್ಟದ ಬಿತ್ತನೆಬೀಜ ಪೂರೈಸುವುದರ ಜೊತೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಗುಣಮಟ್ಟದ ಬೀಜ ಉತ್ಪಾದನೆಯ ಲಾಭ ತರುವ ನಿಗಮವನ್ನಾಗಿಸಬೇಕು. ನಿಗಮ ರೈತರಿಗೆ ಬಿತ್ತನೆ ಬೀಜ ಪೂರೈಸುವ ಕೆಲಸವನ್ನಷ್ಟೇ ಮಾಡದೆ ತಳಿ ವರ್ಧಿತ ಬಿತ್ತನೆ ಬೀಜ, ತರಕಾರಿ ಬೀಜವನ್ನು ನೀಡಿ ರೈತರಿಗೆ ಲಾಭವಾಗುವಂತೆ ಮಾಡಬೇಕು ಎಂದರು.

25-11-2021 Dec Hrd Pg 12